# ಅಪಾಯಕರ ಗರ್ಭಧಾರಣೆ



ಮಹಿಳೆಯು ಗರ್ಭಧಾರಣೆಯ ಸಮಯದಲ್ಲಿ, 'ನೆಗೆಟಿವ್' ರಕ್ತದ ಗುಂಪನ್ನು ಹೊಂದಿದ್ದರೆ ಅಥವಾ ಫೈಬ್ರಾಯ್ಡ್, ಓವೇರಿಯನ್ ಸಿಸ್ಟ್ (ಅಂಡಾಶಯದ ಚೀಲ) ಅಥವಾ ಕ್ಯಾನ್ಸರ್ ಖಾಯಿಲೆಯನ್ನು ಹೊಂದಿದ್ದರೆ, ಅದನ್ನು ಅತ್ಯಂತ ಅಪಾಯಕಾರಿ ಗರ್ಭಧಾರಣೆ ಎಂಬುದಾಗಿ ಪರಿಗಣಿಸಲಾಗುತ್ತದೆ.

ಗರ್ಭಧಾರಣೆ ಹಾಗೂ ಶಿಶು ಜನನ ಪ್ರಕೃತಿಯ ನಿಯಮ. ಗರ್ಭಧಾರಣೆಯನ್ನು ಅಗತ್ಯವಾಗಿ ಶಾರೀರಿಕ ಎಂದು ಪರಿಗಣಿಸಲಾಗುತ್ತದೆ. ಸಾಧಾರಣ ಶಾರೀರಿಕ ಗರ್ಭಧಾರಣೆಯಲ್ಲಿ ಉಂಟಾಗುವಂತಹ ಯಾವುದೇ ವಿಚಲನ, ಅತ್ಯಂತ ಅಪಾಯದ ಸಂಭವವಿರುವ ಗರ್ಭಧಾರಣೆಗೆ ಕಾರಣವಾಗುತ್ತದೆ. ಗರ್ಭಧಾರಣೆಯು, ಅನೇಕ ಅಂಗರಚನೆ ಹಾಗೂ ಜನನಾಂಗಗಳು ಮತ್ತು ದೇಹದ ವಿವಿಧ ಅಂಗ ವ್ಯವಸ್ಥೆಗಳಲ್ಲಿ ಉಂಟಾಗುವ ಬದಲಾವಣೆಗಳೊಂದಿಗೆ ಸಂಬಂಧಿಸಿದೆ ಹಾಗೂ ಈ ಬದಲಾವಣೆಗಳನ್ನು ನಿಭಾಯಿಸಲು ಸಾಧ್ಯವಾಗದಿರುವಂತಹ ಮಹಿಳೆಯರಲ್ಲಿ ಅಪಾಯಕಾರಿ ಗರ್ಭಧಾರಣೆಗೆ ಕಾರಣವಾಗುತ್ತದೆ.

ಕುಳಿತಲ್ಲಿಯೇ ಕುಳಿತು ಕೆಲಸ ನಿರ್ವಹಿಸುವಂತಹ ಆಧುನಿಕ ಜೀವನಶೈಲಿಯ ಫಲಿತಾಂಶದಿಂದಾಗಿ, ಬೊಜ್ಜುತನ, ಪಾಲಿಸಿಸ್ಟಿಕ್ ಓವರೀಸ್ (ಅಂಡಾಶಯಗಳು), ರಕ್ತದೊತ್ತಡ, ಮಧುಮೇಹದಂತಹ ಖಾಯಿಲೆಗಳು ಉಂಟಾಗುತ್ತದೆ ಹಾಗೂ ಇದರಿಂದ ಅಪಾಯಕಾರಿ ಗರ್ಭಧಾರಣೆಯ ಸಂಭವ ಹೆಚ್ಚಾಗುತ್ತದೆ. ಇತರೆ ಮುಖ್ಯವಾದ ಕಾರಣಗಳ ಪೈಕಿ; 30 ವರ್ಷಗಳಿಗಿಂತ ಹೆಚ್ಚಿನ ವಯೋಮಾನದ ಹಾಗೂ ಹದಿಹರೆಯದ ವಯಸ್ಸಿನಲ್ಲಿ ಗರ್ಭಧಾರಣೆ, ಧೂಮಪಾನ, ಒತ್ತಡ ತುಂಬಿದ ಜೀವನ, ಥೈರಾಯ್ಡ್ ಅಸ್ವಸ್ಥತೆಗಳು, ಮೂರ್ಛೆರೋಗ (ಫಿಟ್ಸ್), ಹೃದ್ರೋಗ, ರಕ್ತದೊತ್ತಡ, ಮಧುಮೇಹ, ರಕ್ತಹೀನತೆಗಳು ಸೇರಿವೆ.

ಒಂದು ವೇಳೆ ಮಹಿಳೆಯು, ಗರ್ಭಧಾರಣೆಯ ಸಮಯದಲ್ಲಿ, 'ನೆಗೆಟಿವ್' ರಕ್ತದ ಗುಂಪನ್ನು ಹೊಂದಿದ್ದರೆ ಅಥವಾ ಫೈಬ್ರಾಯ್ಡ್, ಓವೇರಿಯನ್ ಸಿಸ್ಟ್ (ಅಂಡಾಶಯದ ಚೀಲ) ಅಥವಾ ಕ್ಯಾನ್ಸರ್ ಖಾಯಿಲೆಯನ್ನು ಹೊಂದಿದ್ದರೆ, ಅದನ್ನು ಅತ್ಯಂತ ಅಪಾಯಕಾರಿ ಗರ್ಭಧಾರಣೆ ಎಂಬುದಾಗಿ ಪರಿಗಣಿಸಲಾಗುತ್ತದೆ. ಪ್ರಸೂತ್ರಿಗೆ ಸಂಬಂಧಿಸಿದಂತೆ ರೋಗಿಯು ಹಲವು ಬಾರಿ ಗರ್ಭಪಾತಗಳಿಗೆ ಒಳಗಾಗಿದ್ದರೆ, ಹಿಂದಿನ ಪ್ರಸವ ಅಥವಾ ಒಂದಕ್ಕಿಂತ ಹೆಚ್ಚಿನ ಬಾರಿ 'ಸಿಜೇರಿಯನ್' ಚರಿತ್ರೆ ಹೊಂದಿದ್ದರೂ ಸಹ ಅದು ಅಪಾಯಕಾರಿ ಗರ್ಭಧಾರಣೆಗಳು ಎಂದು ಪರಿಗಣಿಸಲ್ಪಡುತ್ತದೆ.

ಗರ್ಭಧಾರಣೆಯ ಸಂದರ್ಭದಲ್ಲಿ ಅಭಿವೃದ್ಧಿಯಾಗುವ ಕೆಲವು ತೊಡಕುಗಳ ಪೈಕಿ ಪ್ಲಾಸೆಂಟ ಪ್ರೀವಿಯ (ಕಸ ಕೆಳಗಿರುವುದು) ಅವಧಿಗೆ ಮುಂಚೆ ಕಸ ಬಳ್ಳಿ ಪ್ರತ್ಯೇಕಗೊಳ್ಳುವುದು, ಕಡಿಮೆ ಅಥವಾ ಹೆಚ್ಚಿನ ಅವಧಿಪೂರ್ವ ಪೊರೆಗಳ ಹರಿಯುವಿಕೆ, ಭ್ರೂಣದ ಬೆಳವಣಿಗೆಯು ಕುಂಠಿತವಾಗುವುದು, ದೀರ್ಘಾವಧಿ ಗರ್ಭಧಾರಣೆ, ಇತ್ಯಾದಿಗಳು ಸೇರಿವೆ.

**ಚಿಕಿತ್ಸೆ:** ಅತೀ ಹೆಚ್ಚಿನ ಅಪಾಯವಿರುವಂತಹ ಗರ್ಭಧಾರಣೆ ಪ್ರಕರಣಗಳನ್ನು, ಹೆರಿಗೆ ಕೊಠಡಿಗಳು, 24/7 ಕಾರ್ಯನಿರ್ವಹಿಸುವಂತಹ ಶಸ್ತ್ರಚಿಕಿತ್ಸಾ ವಿಭಾಗ, ರಕ್ತದ ಬ್ಯಾಂಕ್ ಹಾಗೂ ನುರಿತ ಹಾಗೂ ಅನುಭವಿ ಪ್ರಸೂತಿ ತಂಡದ ಬೆಂಬಲವಿರುವಂತಹ ತುರ್ತು ನಿಗಾ ವ್ಯವಸ್ಥೆಯಿರುವಂತಹ ಚತುಷ್ಕ ಚಿಕಿತ್ಸಾ ಕೇಂದ್ರದಲ್ಲಿ ನಿರ್ವಹಿಸಬೇಕು. ಈ ಸಂದರ್ಭದಲ್ಲಿ ರೋಗಿಯನ್ನು ಅತ್ಯಂತ ಎಚ್ಚರಿಕೆಯಿಂದ ನೋಡಿಕೊಳ್ಳಬೇಕು ಹಾಗೂ ಭ್ರೂಣ ಹಾಗೂ ತಾಯಿಯನ್ನು ಸದಾ ನಿಗಾವಹಿಸುವುದು ಅಗತ್ಯ.

**ತಡೆಗಟ್ಟುವಿಕೆ:** ಯಾವುದೇ ದೋಷ ಅಥವಾ ಸಮಸ್ಯೆಯನ್ನು ಆರಂಭದಲ್ಲಿಯೇ ಪತ್ತೆ ಹಚ್ಚುವ ಸಲುವಾಗಿ ಕ್ರಮಬದ್ಧವಾಗಿ ಪ್ರಸವಪೂರ್ವ ಆರೋಗ್ಯ ತಪಾಸಣೆಯನ್ನು ಪಡೆಯುವುದು ಅಗತ್ಯ. ಇದು ಗರ್ಭದಲ್ಲಿ ಭ್ರೂಣದ ಸರಿಯಾದ ಬೆಳವಣಿಗೆಯ ಬಗ್ಗೆ ನಿಗಾವಹಿಸಲು ನೆರವಾಗುತ್ತದೆ. ಗರ್ಭಧಾರಣೆ ಸಮಯದಲ್ಲಿ ತಾಯಿಯು, ಕಬ್ಬಿಣಾಂಶ ಹಾಗೂ ಫೋಲಿಕ್ ಆ್ಯಸಿಡ್ ಸಪ್ಲಿಮೆಂಟ್‌ಗಳು ಹಾಗೂ ಟೆಟನಸ್ ಲಸಿಕೆ (ಧನುರ್ವಾಯು ಲಸಿಕೆ)ಯನ್ನು ಪಡೆದುಕೊಳ್ಳುವುದು ಅಗತ್ಯ.

ಅತ್ಯಂತ ಅಪಾಯಕಾರಿ ಗರ್ಭಧಾರಣೆಯ ಸೂಕ್ತ ನಿರ್ವಹಣೆಗೆ, ಸಮಸ್ಯೆಯನ್ನು ಮುಂಚಿತವಾಗಿ ಗುರುತಿಸುವುದು ಹಾಗೂ ಸಮಯಕ್ಕೆ ಸರಿಯಾದ ಚಿಕಿತ್ಸೆಯನ್ನು ಒದಗಿಸುವುದು ಅತ್ಯಂತ ಉಪಯುಕ್ತ ಹಾಗೂ ಮುಖ್ಯ.



**ಡಾ॥ ಪದ್ಮ ಎಸ್**
ಸ್ತ್ರೀರೋಗ ಮತ್ತು ಪ್ರಸೂತಿ ತಜ್ಞರು
**ಬಿಜಿಎಸ್ ಗ್ಲೋಬಲ್ ಹಾಸ್ಪಿಟಲ್ಸ್**
– ಸೂಪರ್ ಸ್ಪೆಷಾಲಿಟಿ ಕ್ವಾಟರ್ನರಿ ಕೇರ್

080 - 30 44 44 44 | infogh@globalhospitalsindia.com | globalhospitalsindia.com